## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 100/2024

**ಸಾಕ್ಷಿಯನ್ನು ದಿಃ 08.09.2025 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಪ್ರಕಾಶ್ | ಸಿಡಬ್ಲ್ಯೂಃ 3 | ಪಿಡಬ್ಲ್ಯೂಃ 3 |
| ತಂದೆಯ ಹೆಸರು | ಪಾಂಡು | | |
| ವಯಸ್ಸು | 38 ವರ್ಷ | | |
| ಕೆಲಸ | ಎಲೆಕ್ಟ್ರಿಷಿಯನ್ | | |
| ವಾಸಸ್ಥಳ | ಹೌಸಿಂಗ್ ಬೋರ್ಡ್ | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಚಾಸಾ–1, 2, 4 ರಿಂದ 6 ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತು. 1ನೇ ಆರೋಪಿ ಗೈರು ಹಾಜರಿದ್ದು, ವಕೀಲರು ವಿನಾಯಿತಿ ಅರ್ಜಿಯನ್ನು ಸಲ್ಲಿಸಿ ಗುರುತಿಸುವಿಕೆಯ ಬಗ್ಗೆ ತಕರಾರು ಇಲ್ಲ ಎಂದು ನುಡಿದ ಕಾರಣ ವಿನಾಯಿತಿ ಅರ್ಜಿಯನ್ನು ಅಂಗೀಕರಿಸಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸ್ ಠಾಣೆಯಲ್ಲಿ ಹೇಳಿಕೆ ಕೊಟ್ಟಿದ್ದೇನೆ. ದಿಃ 12.12.2024 ರಂದು ಬೆಳಗಿನ ಜಾವ 6–30 ಗಂಟೆಗೆ ನಾನು ಹಾಲು ತರಲೆಂದು ಹೋಗುತ್ತಿದ್ದೆ. ಆಗ ಚಾಸಾ–1 ರವರ ಮನೆಯಲ್ಲಿ ಗಲಾಟೆ ಕೂಗಾಟ ಕೇಳಿತು. ನಾನು ಮತ್ತು ಚಾಸಾ–2 ರವರು ಹೋಗಿ ನೋಡಿದಾಗ, 2ನೇ ಆರೋಪಿ ಚಾಸಾ–1 ರವರ ಕೈ ಹಿಡಿದುಕೊಂಡಿದ್ದು, 1ನೇ ಆರೋಪಿ ಚಾಸಾ–1 ರವರ ಮಾಂಗಲ್ಯ ಚೈನನ್ನು ಕಿತ್ತುಹಾಕಿ, ಮುಂದಲೆ ಹಿಡಿದು ದರದರನೇ ಎಳೆದುಕೊಂಡು ಬಂದರು. ನಿನ್ನ ಮಗನಿಗೆ ಹಾಗೆ ಮಾಡುತ್ತೇನೆ, ಹೀಗೆ ಮಾಡುತ್ತೇನೆ, ಮನೆಯ ಒಳಗೆ ಬಂದರೆ ಕೊಲೆ ಮಾಡುತ್ತೇನೆ ಎಂದು ಕೊಲೆ ಬೆದರಿಕ ಹಾಕಿದರು. 1ನೇ ಆರೋಪಿ ಬಲಗಾಲಿನಲ್ಲಿ ಚಾಸಾ–1 ರವರ ಸೊಂಟದ ಬಲಭಾಗಕ್ಕೆ ಒದ್ದರು. ನಾವು ಎಷ್ಟು ಹೇಳಿದರೂ ಕೂಡ ಆರೋಪಿತರು ಬಿಡಲಿಲ್ಲ. ನಂತರ ಚಾಸಾ–1 ರವರನ್ನು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ, ಚಾಸಾ–4 ರವರಿಗೆ ವಿಷಯವನ್ನು ತಿಳಿಸಿದೆವು. 5 ದಿನದ ನಂತರ ಪೋಲಿಸರು ನನ್ನನ್ನು ಕರೆದಿದ್ದರು. ಆಗ ನಾನು ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ**

ದಿಃ 12.12.2023 ರಂದು ಬೆಳಿಗ್ಗೆ 6–30 ಗಂಟೆಗೆ ನಾನು ಮನೆಯ ಬಳಿ ಇದ್ದಾಗ ಗಲಾಟೆಯಾಗುತ್ತಿತ್ತು ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ನಾನು ಅಲ್ಲಿಗೆ ಹೋಗಿ ನೋಡಿದಾಗ 1ನೇ ಆರೋಪಿಯು ಚಾಸಾ–1 ರವರಿಗೆ ಲೋಫರ್ ಮುಂಡೆ, ನಾನು ನಿನನ್ನ ಕಾಯಬೇಕಾ ಎಂದು ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿ. 1ನೇ ಆರೋಪಿ ಚಾಸಾ–1 ರವರ ಕುತ್ತಿಗೆಯನ್ನು ಹಿಡಿದು ಸಾಯಿಸುತ್ತೇನೆ ಎಂದು ಬೆದರಿಕೆ ಹಾಕಿದರು ಎಂದರೆ ಸರಿ. ಆಗ 2ನೇ ಆರೋಪಿ ಚಾಸಾ–1 ರವರ ಎರಡೂ ಕೈಗಳನ್ನು ಹಿಡಿದು ನಿನ್ನನ್ನು ಸಾಯಿಸದೇ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿದರು ಎಂದರೆ ಸರಿ. ಆಗ ನಾನು ಮತ್ತು ಚಾಸಾ–2 ರವರು ಜಗಳ ಬಿಡಿಸಿದ್ದೇವೆ ಎಂದು ಹೇಳಿದ್ದೇನೆ ಎಂದರೆ ಸರಿ. ಚಾಸಾ–1 ರವರು ಆರೋಪಿತರ ವಿರುದ್ದ ಕೇಸು ಕೊಟ್ಟ ವಿಚಾರ ನನಗೆ ಗೊತ್ತಾಯಿತು ಎಂದರೆ ಸರಿ. ಈ ಬಗ್ಗೆ ನಾನು ದಿಃ 18.12.2023 ರಂದು ಪೋಲೀಸ್ ಠಾಣೆಯಲ್ಲಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಸ್.ಪಿ ವಕೀಲರಿಂದಃ**

ಈ ದಿನ ನಾನು ಚಾಸಾ–1 ರವರ ತಂದೆಯೊಂದಿಗೆ ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದರೆ ಸರಿ. ಚಾಸಾ–1 ರವರ ತಂದೆ ಹೆಚ್.ಡಿ ಕೋಟೆ ತಾಲ್ಲೂಕಿನಲ್ಲಿ ವಾಸವಿದ್ದಾರೆ ಎಂದರೆ ಸರಿ. ನಾವು ಎಲ್ಕ್ಟ್ರಿಕಲ್ ಕೆಲಸದೊಂದಿಗೆ ಕೋರಿಯರ್ ಕೆಲಸ ಕೂಡ ಮಾಡುತ್ತೇನೆ ಎಂದರೆ ಸರಿ. ನಾನು ಕೋರಿಯರ್ ಕೆಲಸವನ್ನು ಮೈಸೂರಿನಲ್ಲಿ ಮಾಡುತ್ತಿದ್ದೇನೆ ಎಂದರೆ ಸರಿ. ಮೈಸೂರಿನಲ್ಲಿ ಕೋರಿಯರ್ ಕೆಲಸಕ್ಕೆ ನಾನು ಬೆಳಿಗ್ಗೆ 7.30 ಗಂಟೆಗೆ ಮನೆ ಬಿಡುತ್ತೇನೆ ಎಂದರೆ ಸರಿಯಲ್ಲ. ನಾನು ರಾತ್ರಿ 8–00 ಗಂಟೆಗೆ ಹೋದರೆ ಬೆಳಿಗ್ಗೆ 5–00 ಗಂಟೆಗೆ ಕೆಲಸ ಮುಗಿಯುತ್ತದೆ. ನಾನು ಮನೆಗೆ ಬರುವಾಗ ಬೆಳಿಗ್ಗೆ 7–30 ಗಂಟೆ ಆಗುತ್ತದೆ ಎಂದರೆ ಸರಿಯಲ್ಲ. 5–45 ಕ್ಕೆ ಬಂದು ಬಿಡುತ್ತೇನೆ. ಚಾಸಾ–1 ನನ್ನ ಸ್ವಂತ ಅಕ್ಕನ ಮಗಳು ಎಂದರೆ

ಸರಿ. ಕಲ್ಲುಣಿಕೆಯಲ್ಲಿ ಇರುವ ಚಾಸಾ–1 ರವರ ವಸತಿ ಗೃಹದಿಂದ ಎರಡು ಬೀದಿ ನಂತರದಲ್ಲಿ ನನ್ನ ಮನೆ ಇದೆ ಎಂದರೆ ಸರಿ. ಆ ಎರಡು ಬೀದಿಗಳಲ್ಲಿ ಸುಮಾರು 60–70 ಮನೆಗಳು ಇವೆ ಎಂದರೆ ಸರಿ. ಚಾಸಾ–1 ವಾಸವಿದ್ದಾರೆ ಎನ್ನುವ ಮನೆಯಲ್ಲಿ ಆರೋಪಿತರು, ಚಾಸಾ–1 ಮತ್ತು ಅವರ ಮಗ ಹಾಗೂ 1ನೇ ಆರೋಪಿಯ ತಾಯಿ ವಾಸವಿದ್ದಾರೆ. ಚಾಸಾ–1 ರವರ ಮನೆಯಲ್ಲಿ ಕೂಗಾಟ ಆದರೆ ನನ್ನ ಮನೆಗೆ ಕೇಳುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ನಾನು ರಸ್ತೆಯಲ್ಲಿ ಹೋಗುತ್ತಿದ್ದಾಗ ಗಲಾಟೆ ಕೇಳಿಸಿತು. ನಾನು ಮನೆಯಲ್ಲಿದ್ದಾಗ ನನಗೆ ಕೂಗಾಟ ಕಿರುಚಾಟ ಕೇಳಿದೆ ಎಂದು ನಾನು ಹೇಳಿಲ್ಲ. ಸಾಕ್ಷಿಯ ಹೇಳಿಕೆಯಲ್ಲಿ ಸದರಿ ಭಾಗವನ್ನು ನಿಡಿ–1 ಎಂದು ಗುರುತಿಸಲಾಯಿತು. ನಾನು ಹಾಲು ತೆಗೆದುಕೊಂಡು ಬರಲು ಹೋಗುತ್ತಿದ್ದಾಗ ಕೂಗಾಟ ಕಿರುಚಾಟ ಆಗಿದೆ ಎಂದು ನಾನು ಹೇಳಿಲ್ಲ ಎಂದರೆ ಸರಿ. ನಾನು ಮತ್ತು ಚಾಸಾ–2 ರವರು ಒಂದೇ ಮನೆಯಲ್ಲಿದ್ದೇವೆ. ನಾನು ಮತ್ತು ಚಾಸಾ–2 ರವರು ಜೊತೆಯಲ್ಲಿ ಹಾಲು ತರಲು ಹೋಗುತ್ತಿದ್ದೆವು. ನಾನು ಮತ್ತು ಚಾಸಾ–2 ರವರು ತರಕಾರಿ ಮತ್ತು ಹಾಲು ತರಲು ಜೊತೆಯಲ್ಲಿ ಹೋಗುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ–1 ರವರ ವಾಸದ ಮನೆಯ ಅಕ್ಕ–ಪಕ್ಕ ಬೇರೆ ವಾಸದ ಮನೆಗಳು ಇವೆ ಎಂದರೆ ಸರಿ. ಚಾಸಾ–1 ರವರ ಮನೆಯ ಎದುರುಗಡೆ ಕೃಷ್ಣ ಎನ್ನುವವರ ಮನೆ ಇದೆ ಎಂದರೆ ಸರಿ. ಸದರಿ ಮನೆಯ ಮುಂಭಾಗ ಸಿಸಿ ಕ್ಯಾಮರಾಗಳು ಇವೆ ಎಂದರೆ ಸರಿ. ನಾನು ಹೋಗಿದ್ದೇನೆ ಎನ್ನುವಾಗ ಅಕ್ಕಪಕ್ಕದ ಮನೆಯವರು ಯಾರು ಬರಲಿಲ್ಲ. ಚಾಸಾ–2 ಮತ್ತು 3 ರವರನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ ಎಂದರೆ ಸರಿ. ಮನೆಯ ಆಚೆಗೆ ಎಳೆದುಕೊಂಡು ಬಿಸಾಡಿ ಸಾರ್ವಜನಿಕರ ಮುಂದೆ ಅವಮಾನ ಮಾಡುತ್ತಿದ್ದರು ಎಂದು ನನ್ನ ಹೇಳಿಕೆಯಲ್ಲಿ ಹೇಳಿದ್ದೇನೆ. ನಾನು ಹೇಳಿದಂತಹ ಗಲಾಟೆ ಆಗದೇ ಇರುವ ಕಾರಣ ಅಕ್ಕಪಕ್ಕದಲ್ಲಿ ಯಾರು ಬಂದಿರಲಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿಯ ತಾಯಿ ನನಗೆ ಚಿಕ್ಕಮ್ಮನಾಗಬೇಕು. ಅವರು ಮನೆಯಲ್ಲಿದ್ದರು. ನಿಮ್ಮ ಚಿಕ್ಕಮ್ಮನವರನ್ನು ನೀವು ವಿಚಾರಿಸಿದ್ದಿರಾ ಎಂದರೆ ವಿಚಾರಿಸಿದ್ದೇನೆ ಅವರು ಸುಮ್ಮನಿದ್ದರು. ನೀವು ಹೋಗುವ ಮೊದಲು ನಿಮ್ಮ ಚಿಕ್ಕಮ್ಮ ಗಲಾಟೆ ಬಿಡಿಸಲು ಪ್ರಯತ್ನಿಸಿದ್ದಾರೆಯೇ ಎಂದರೆ ಪ್ರಯತ್ನಿಸಿದ್ದರು. ನಾನು ಸುಮಾರು ಮುಕ್ಕಾಲು ಗಂಟೆ ಸ್ಥಳದಲ್ಲಿದ್ದೆ. ಆ ಸಮಯದಲ್ಲಿ ಆಜುಬಾಜುವಿನವರು ಯಾರು ಬಂದಿಲ್ಲ.

ನಾನು ಆಟೋದಲ್ಲಿ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆ. ಯಾರು ಆಟೋ ತಂದರು ಎಂದರೆ ಹೇಳಲಾಗುವುದಿಲ್ಲ. ಚಾಸಾ–1 ರವರ ಮನೆ ವಸತಿ ಗೃಹದ ಮಧ್ಯೆಭಾಗದಲ್ಲಿ ಇದೆ ಎಂದರೆ ಸರಿ. ಅಲ್ಲಿ ಬಿಟ್ಟರೇ ಕಲ್ಲುಣಿಕೆ ಸರ್ಕಲ್ ಗೆ ಬಂದರೆ ಆಟೋ ಸಿಗುತ್ತದೆ ಎಂದರೆ ಸರಿ. ಸುಮಾರು 200–300 ಮೀಟರ್ ದೂರ ಇದೆ ಎಂದರೆ ಸರಿ. ಚಾಸಾ–1 ಮತ್ತು 2 ರವರನ್ನು ಆಟೋದಲ್ಲಿ ಕಳುಹಿಸಿ ನಾನು ಒಬ್ಬನೇ ಗಾಡಿಯಲ್ಲಿ ಹೋದೆ. ಹಾಲು ತರಲು ನಾವು ಗಾಡಿಯಲ್ಲಿ ಹೋಗುತ್ತಿದ್ದೆವು. ಆಸ್ಪತ್ರೆಯ ಎದುರುಭಾಗದಲ್ಲಿ ಪೋಲೀಸ್ ಠಾಣೆ ಇದೆ ಎಂದರೆ ಸರಿ. ಆಸ್ಪತ್ರೆಗೆ ಹೋದಾಗ 7–8 ಗಂಟೆ ಸಮಯವಾಗಿತ್ತು. ಆಸ್ಪತ್ರೆಯಲ್ಲಿ ಸುಮಾರು ಮುಕ್ಕಾಲು ಗಂಟೆ ಇದ್ದೆವು. ಹೇಗೆ ಗಾಯಗಳಾದವು ಎಂದು ವೈದ್ಯರ ಬಳಿ ಹೇಳಿದ್ದಿರಾ ಎಂದರೆ ನಾನು ಹೇಳಿಲ್ಲ. ಆ ಸಮಯದಲ್ಲಿ ಚಾಸಾ–1 ರವರು ವೈದ್ಯರಿಗೆ ಮಾಹಿತಿ ಕೊಟ್ಟಿದ್ದಾರೆಯೇ ಎಂದರೆ ಕೊಟ್ಟಿದ್ದಾರೆ. ಆಸ್ಪತ್ರೆಯ ಮುಂಭಾಗ ಠಾಣೆ ಇರುವ ಕಾರಣ ತಕ್ಷಣ ನನಗೆ ದೂರು ಕೊಡಲು ತೊಂದರೆ ಇರಲಿಲ್ಲ ಎಂದರೆ ಸರಿ. ನಾವು ಆಸ್ಪತ್ರೆಯಲ್ಲಿದ್ದಾಗ ಪೋಲಿಸರು ಬರಲಿಲ್ಲ. ನಾನು ಪೋಲೀಸ್ ಠಾಣೆಗೆ ಆಗಾಗ್ಗೆ ಹೋಗಿ ಬರುವುದಿಲ್ಲ. ನನ್ನ ಮೊಬೈಲ್ ಸಂಖ್ಯೆಯನ್ನು ನನ್ನ ಮಗ ಕೊಟ್ಟಿದ್ದಾನೆ. ದಿಃ 12.12.2023 ರಂದು ಸಂಜೆ 6 ಗಂಟೆಗೆ ನಾನು ಕೆಲಸದಿಂದ ಮನೆಗೆ ಬಂದಿದ್ದೆ. ಆಗ ಚಾಸಾ–1 ಆಸ್ಪತ್ರೆಯಲ್ಲಿದ್ದರು. ಸಂಜೆ ಕೂಡ ನಾನು ಆಸ್ಪತ್ರೆಗೆ ಹೋಗಿದ್ದೆ. ಆಗ ದೂರು ಕೊಟ್ಟ ಬಗ್ಗೆ ವಿಚಾರಿಸಿದ್ದಿರಾ ಎಂದರೆ ತಾಯಿ ಬರಬೇಕು ಅಂದರೆ ನನ್ನ ಅಕ್ಕ ಬರಬೇಕು ಎಂದು ಹೇಳಿದರು. ಆ ದಿನ ಅಕ್ಕ ಬಂದಿದ್ದರು. ನಾನು ಸಂಜೆ ಕೆಲಸ ಮುಗಿಸಿಕೊಂಡು ಬರುವಾಗ ನನ್ನ ಅಕ್ಕ ಇದ್ದರು. ಆಗಲೂ ಕೂಡ ದೂರು ಕೊಡಲು ತೊಂದರೆ ಇರಲಿಲ್ಲ ಎಂದರೆ ಸರಿ. ಆದರೆ ದೂರು ಕೊಡಲಿಲ್ಲ. ಚಾಸಾ–1 ರವರು ಎರಡು ದಿನ ಆಸ್ಪತ್ರೆಯಲ್ಲಿದ್ದರು. ಆಸ್ಪತ್ರೆಯಿಂದ ಬಂದ ನಂತರ ದೂರು ಕೊಟ್ಟಿದ್ದಾರಾ ಎಂದು ವಿಚಾರಿಸಿದ್ದಿರಾ ಎಂದರೆ ಇಲ್ಲ. ಚಾಸಾ–1 ಈಗ ಮೃತಪಟ್ಟಿದ್ದಾರೆ. ತೀರಿಹೋಗುವ 2 ವರ್ಷ ಹಿಂದಿನಿಂದಲೂ ಸಣ್ಣ–ಪುಟ್ಟ ವಿಚಾರಕ್ಕೆ ಗಲಾಟೆ ಮಾಡಿ ತಂದೆಯ ಮನೆಗೆ ಹೋಗುತ್ತಿದ್ದರು ಎಂದರೆ ಸರಿಯಲ್ಲ. ಚಾಸಾ–1 ತನ್ನ ತಂದೆಯ ಮನೆಯಾದ H.D.ಕೋಟೆಯಲ್ಲಿ ಮೃತಪಟ್ಟರು ಎಂದರೆ ಸರಿ. ಸಾಯುವ ಒಂದು ವರ್ಷ ಹಿಂದಿನಿಂದಲೂ ಚಾಸಾ–1 ತನ್ನ ತಂದೆಯ ಮನೆಯಲ್ಲಿ ವಾಸವಿದ್ದರು. 1ನೇ ಆರೋಪಿಯ ತಾಯಿಯ ಹೆಸರಿನಲ್ಲಿರುವ

ಮನೆಯನ್ನು ತನ್ನ ಅಥವಾ ತನ್ನ ಮಗುವಿನ ಹೆಸರಿಗೆ ಮಾಡಿಕೊಡುವಂತೆ ಚಾಸಾ-1 ಕೇಳುತ್ತಿದ್ದರು ಎಂದರೆ ಸರಿಯಲ್ಲ. ತಾಯಿ ತೀರಿಹೋದ ನಂತರ ಕೇಳುತ್ತಿದ್ದರು. 1ನೇ ಆರೋಪಿಯ ತಾಯಿ ಸದರಿ ಮನೆ ಚಾಸಾ-1 ರವರ ಗಂಡ ಮತ್ತು 1ನೇ ಆರೋಪಿ ಇಬ್ಬರಿಗೂ ಸೇರಿದ್ದು ಎಂದು ಹೇಳುತ್ತಿದ್ದರು ಎಂದರೆ ಸರಿ. ಮನೆಗೆ ಸಂಬಂಧಪಟ್ಟ ಹಾಗೆ 2-3 ವರ್ಷ ಹಿಂದಿನಿಂದಲೂ ಚಾಸಾ-1 ರವರ ಮನೆಯಲ್ಲಿ ಗಲಾಟೆಯಾಗುತ್ತಿತ್ತು ಎಂದರೆ ಸರಿ. 1ನೇ ಆರೋಪಿಯ ತಾಯಿ ಮುಂದಕ್ಕೆ ಮನೆಯನ್ನು ಬರೆದುಕೊಡುತ್ತೇನೆ ಎಂದು ಹೇಳುತ್ತಿದ್ದರು ಎಂದರೆ ಸರಿ. ಮನೆಯ ವಿಚಾರಕ್ಕೆ ಸಂಬಂಧಿಸಿದಂತೆ ಚಾಸಾ-1 ರವರು ತಂದೆಯ ಮನೆಗೆ ಹೋಗಿ ಉಳಿದುಕೊಂಡಿದ್ದರು ಎಂದರೆ ಸರಿ. ದಿಃ 12.12.2023 ರಂದು ಬೆಳಿಗ್ಗೆ 6.30 ಗಂಟೆಗೆ ನಾನು ಮತ್ತು ಚಾಸಾ-2 ರವರು ಹೋಗುತ್ತಿದ್ದಾಗ ಚಾಸಾ.1 ರವರ ಮನೆಯಲ್ಲಿ ಗಲಾಟೆ ನಡೆಯುತ್ತಿತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2ನೇ ಆರೋಪಿ ಚಾಸಾ-1 ರವರ ಮುಂದಲೆ ಹಿಡಿದುಕೊಂಡು ಎಳೆದುಕೊಂಡು ಬಂದರು, 1ನೇ ಆರೋಪಿ ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಕಾಲಿನಿಂದ ಬಲಭಾಗದ ಸೊಂಟಕ್ಕೆ ಒದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿತರು ಚಾಸಾ-1 ರವರಿಗೆ ಕೊಲೆ ಬೆದರಿಕೆ ಹಾಕಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರನ್ನು ನಾನು ಮತ್ತು ಚಾಸಾ-2 ರವರು ಆಟೋದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 12.12.2023 ರಂದು ಯಾವುದೇ ಗಲಾಟೆ ನಡೆಯದೇ ಇರುವ ಕಾರಣವೇ ಯಾವುದೇ ದೂರನ್ನು ದಾಖಲಿಸಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರ ತಂದೆಯ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.